

ಮೂಡಿಸುವುದು ನಡೆದೇ ಇತ್ತು. 2016ರಲ್ಲಿ ಗಂಭೀರವಾಗಿ ಶುರುವಾದ ‘ಗಾಂಧಿಧ್ಯಾನ’ ಈಗ ಎಪ್ಪತ್ತೈದು ಕಲಾಕೃತಿಗಳ ಹಂತಕ್ಕೆ ತಲುಪಿದೆ’ ಎಂದು ಹೇಳುವ ಅವರಿಗೆ, ತಮ್ಮ ಕಲಾಕೃತಿಗಳಿಗೆ ಕಲಾಸಮುದಾಯದ ಜೊತೆಗೆ ಜನಸಾಮಾನ್ಯರಿಂದಲೂ ವ್ಯಕ್ತವಾಗುತ್ತಿರುವ ಪ್ರೀತಿ ಮತ್ತು ಪ್ರತಿಕ್ರಿಯೆ ಸಂತಸ ತಂದಿದೆ. ಗುಮಾಸ್ತ, ಎಲೆಕ್ಟ್ರೀಷಿಯನ್‌ರಂಥ ಜನ ಗಾಂಧಿ ಕಲಾಕೃತಿಗಳನ್ನು ಬಯಸುವುದು ಕಲಾವಿದನಾಗಿ ಅವರ ಪುಳಕ ತಂದಿದೆ.

ಬೆಂಗಳೂರಿನ ಚಿತ್ರಕಲಾ ಪರಿಷತ್ತಿನಲ್ಲಿ ಅ. 3ರಿಂದ 12ರವರೆಗೆ ಮೂರ್ತಿಯವರ ‘ಎ ಟ್ರಿಬ್ಯೂಟ್ ಟು ಮಹಾತ್ಮ’ ಪ್ರದರ್ಶನ ನಡೆಯಲಿದೆ. ಮುಂದಿನ ವರ್ಷ ಈ ‘ಗಾಂಧಿಯಾನ’ ವಿದೇಶಗಳಲ್ಲೂ ನಡೆಯಲಿದೆಯಂತೆ. ಹೌದಲ್ಲವೇ – ಗಾಂಧಿ ಯಾರಿಗೆ ಬೇಡ?

ಪ್ರತಿಕ್ರಿಯಿಸಿ: feedback@sudha.co.in

